ಕ್ರಿಮಿನಲ್ ಮಿಸ್ ನಂಃ 23/2023

ಪಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **16.10.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಜಿ.ಹೆಚ್. ವಕೀಲರಿಂದಃ**

ನನ್ನ ತಾಯಿಯ ಮನೆ ಹೊನ್ನಾವರ ತಾಲೂಕಿನ ಕೆಕ್ಕಾರ ಆಗಿರುತ್ತದೆ. ನನ್ನ ತಂದೆಯ ಹೆಸರು ರಾಮ ಹರಿಯಣ್ಣ ಮಡಿವಾಳ. ನನ್ನ ತಂದೆ ತೀರಿಕೊಂಡಿದ್ದಾರೆ. ನನ್ನ ಮದುವೆಯು ಎದುರುದಾರರ ಜೊತೆ ಹಿರಿಯರು ನಿಶ್ಚಯ ಮಾಡಿದ ಮದುವೆಯಾಗಿರುತ್ತದೆ. ಆ ಸಂದರ್ಭದಲ್ಲಿ ನಾನು ಎದುರುದಾರನ ಹಾಗೂ ಆತನ ಮನೆಯ ಕುರಿತಾಗಿ ತಿಳಿದುಕೊಂಡ ನಂತರವೇ ಎದುರುದಾರರನ್ನು ಮದುವೆಯಾಗಿರುತ್ತೇನೆ. ಮದುವೆಯಾದ ನಂತರ ನಾನು, ನನ್ನ ಗಂಡ ಹಾಗೂ ನನ್ನ ಅತ್ತೆ ಮತ್ತು ನನ್ನ ಗಂಡನ ಅಣ್ಣ ಮನೆಯಲ್ಲಿ ವಾಸವಾಗಿದ್ದೆವು. ನನ್ನ ಅತ್ತೆಯು ಬೇರೆಯವರ ಮನೆಯ ಕೆಲಸಕ್ಕೆ ಹೋಗುತ್ತಾರೆ.

ನನ್ನ ಅತ್ತೆಯು ತಮ್ಮ ಜೀವನವನ್ನು ಸಾಗಿಸಲು ಬೇರೆಯವರ ಮನೆಗೆ ಕೆಲಸಕ್ಕೆ ಹೋಗುತ್ತಾರೆ ಎಂದಾಗ ಸಾಕ್ಷಿಯು ಅವರು 7-8 ಲಕ್ಷ ರೂಪಾಯಿ ಅಡಿಕೆಯನ್ನು ಹಾಕುತ್ತಾರೆ, ಆದರೂ ಸಹ ಬೇರೆಯವರ ಮನೆಯ ಕೆಲಸಕ್ಕೆ ಹೋಗುತ್ತಾರೆ ಎಂಬುದಾಗಿ ನುಡಿದಿದ್ದಾರೆ. ಎದುರುದಾರರ ಅಣ್ಣ ಈಗ ತೀರಿಕೊಂಡಿದ್ದಾರೆ. ಎದುರುದಾರನ ಮನೆಯಲ್ಲಿ ನನ್ನ ಅತ್ತೆಯು ಜೀವನನವನ್ನು ಸಾಗಿಸುತ್ತಿದ್ದಾರೆ ಎಂದರೆ ಇರಬಹುದು.

ನಾನು ಬಿ.ಎ. ಬಿ.ಎಡ್. ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಗಂಡನು ಎಸ್.ಎಸ್.ಎಲ್.ಸಿ. ಓದಿರಬಹುದು. ಮದುವೆಯಾಗುವ ಕಾಲಕ್ಕೆ ನನಗೆ ನನ್ನ ಗಂಡನ ವಿದ್ಯಾಭ್ಯಾಸದ ಬಗ್ಗೆ ಮಾಹಿತಿ ಇತ್ತು. ಎದುರುದಾರನು BMTC ನಲ್ಲಿ ಚಾಲಕರಾಗಿದ್ದಾರೆ ಎಂದರೆ ಸರಿ. ಎದುರುದಾರನು ಬೆಂಗಳೂರಿನಲ್ಲಿ ಬಾಡಿಗೆ ಮನೆಯನ್ನು ಮಾಡಿಕೊಂಡು ಅಲ್ಲಿಯೇ ವಾಸವಿದ್ದು ವಾರಕ್ಕೊಮ್ಮೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿ. ನಮಗೆ ಇಬ್ಬರು ಮಕ್ಕಳಿರುತ್ತಾರೆ. ಎದುರುದಾರನು ಬೆಂಗಳೂರಿಗೆ ನನ್ನ ಮತ್ತು ನನ್ನ ಮಕ್ಕಳನ್ನು ಕರೆದುಕೊಂಡು ಹೋದರೆ ಹೆಚ್ಚಿಗೆ ಖರ್ಚು ಆಗುತ್ತದೆ ಎಂದು ನನಗೆ ತಿಳಿ ಹೇಳಿ ಇಲ್ಲಿಯೇ ಇರು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಾನು ನಮ್ಮ ಅತ್ತೆಯ ಜೊತೆ ಗಲಾಟೆ ಮಾಡಿದ್ದರಿಂದ ನನ್ನ ಗಂಡನು ನನ್ನನ್ನು ಮತ್ತು ನನ್ನ ಮಕ್ಕಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಮ್ಮ ಅತ್ತೆಯೂ ಸಹ ಬೆಂಗಳೂರಿಗೆ ಬಂದು ನಮ್ಮ ಜೊತೆಯಲ್ಲಿಯೇ ವಾಸವಿದ್ದರು ಎಂಬುದಾಗಿ ನುಡಿದಿದ್ದಾರೆ. 2019 ನೇ ಸಾಲಿನಲ್ಲಿ ಎದುರುದಾರನ ಅಣ್ಣ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. 2020-2021 ನೇ ಸಾಲಿನಲ್ಲಿ ಕೋವಿಡ್ ಇತ್ತು. ಆ ಸಂದರ್ಭದಲ್ಲಿ ಎದುರುದಾರನು ಎರಡು ವರ್ಷಗಳ ಕಾಲ ಸಂಬಳವನ್ನು ಪಡೆಯದೇ ಮನೆಯಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 1 ತಿಂಗಳು ಮಾತ್ರ ಊರಿನಲ್ಲಿ ಇದ್ದರು ಎಂದು ನುಡಿದಿದ್ದಾರೆ.

ಆ ಸಂದರ್ಭದಲ್ಲಿ ನಾನು ನನ್ನ ಅತ್ತೆಯೊಂದಿಗೆ ಗಲಾಟೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನು ಅದೇ ಮನೆಯಲ್ಲಿ ಪ್ರತ್ಯೇಕ ಕೋಣೆಯಲ್ಲಿ ನಮಗೆ ಇರುವಂತೆ ವ್ಯವಸ್ಥೆಯನ್ನು ಮಾಡಿದ್ದರು ಎಂದರೆ ಸರಿ. ಸದ್ರಿ ಪ್ರತ್ಯೇಕ

ಕೋಣೆಗೆ ಪ್ರತ್ಯೇಕವಾಗಿ ಬಾತ್‌ರೂಮ್ ಹಾಗೂ ಶೌಚಾಲಯದ ವ್ಯವಸ್ಥೆ ಇತ್ತು ಎಂದರೆ ಸರಿಯಲ್ಲ. ನಾನು ಎದುರುದಾರನಿಗೆ ಕಿರಿಕಿರಿ ಮಾಡಿದ್ದರಿಂದ ಅವರು ಸಿಕ್ಕಾಪಟ್ಟೆ ಹಣವನ್ನು ಸಾಲ ಮಾಡಿ ನಮ್ಮನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಎದುರುದಾರನಿಗೆ ಕರೆ ಮಾಡಿ ನನ್ನ ಅತ್ತೆಯು ನನಗೆ ಕಿರುಕುಳ ನೀಡುತ್ತಿರುವ ವಿಷಯವನ್ನು ಪದೇ ಪದೇ ಹೇಳಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು ನಮ್ಮ ಮನೆಯಲ್ಲಿ ಹಾಗೂ ಕೋಣೆಯಲ್ಲಿ ಸಿಸಿ ಟಿವಿ ಕ್ಯಾಮೆರಾವನ್ನು ಅಳವಡಿಸಿದ್ದನು ಎಂದರೆ ಸರಿ. ಸಿಸಿ ಟಿವಿ ಕ್ಯಾಮೆರಾ ಹಾಕಿದ ತರುವಾಯ ನಾನು ನನ್ನ ಮಕ್ಕಳನ್ನು ಕರೆದುಕೊಂಡು ನನ್ನ ತವರು ಮನೆಯ ಹೋಗಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಅಲ್ಲಿಯೇ ವಾಸವಿದ್ದೆನು ಎಂಬುದಾಗಿ ನುಡಿದಿದ್ದಾರೆ.

ನಾನು ನನ್ನ ಅತ್ತೆಯ ಉಪಚಾರವನ್ನು ಮಾಡಲಾಗದೇ ಮನೆಯನ್ನು ಬಿಟ್ಟು ತವರು ಮನೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನು ತನ್ನ ತಾಯಿಯ ಆರೈಕೆಯನ್ನು ಮಾಡುತ್ತಿರುವುದನ್ನು ಸಹಿಸಲಾರದೇ ನಾನು ತವರು ಮನೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ಆನಂತರ ಎದುರುದಾರನು ಹಿರಿಯರ ಮುಖಾಂತರ ಪಂಚಾಯತಿ ಮಾಡಲು ನನ್ನ ತವರು ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ. ಎದುರುದಾರನು ನನಗೆ ವಕೀಲರ ಮೂಲಕ ನೋಟಿಸನ್ನು ನೀಡಿದ್ದಾನೆ ಎಂದರೆ ಸರಿ. ನಾನು ಸದ್ರಿ ನೋಟಿಸಿಗೆ ನಮ್ಮ ವಕೀಲರ ಮೂಲಕ ಉತ್ತರವನ್ನು ನೀಡಿದ್ದೇನೆ ಎಂದರೆ ಸರಿ. ಸದ್ರಿ ಪ್ರತ್ಯುತ್ತರದಲ್ಲಿ ನಾನು ನಿನ್ನನ್ನು ಮದುವೆಯಾಗಿದ್ದೇನೆ, ನಿನ್ನ ಜೊತೆ ಮಾತ್ರ ವಾಸವಿರುತ್ತೇನೆ, ನಿನ್ನ ತಾಯಿಯ ಜೊತೆ ಇರುವುದಿಲ್ಲ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರತ್ಯುತ್ತರದ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಆರ್.1 ಎಂದು ಗುರುತಿಸಲಾಯಿತು. ತದನಂತರ ಎದುರುದಾರನು ನನ್ನ ಹತ್ತಿರ ಬಂದು ನನ್ನ ತಾಯಿಯನ್ನು ಬಿಟ್ಟು ನನಗೆ ಉಳಿಯಲು ಆಗುವುದಿಲ್ಲ ಎಂದು ಮೌಖಿಕವಾಗಿ ಹೇಳಿದ್ದನು ಎಂದರೆ ಸರಿಯಲ್ಲ. ಆನಂತರ ನಾನು ಎದುರುದಾರನನ್ನು ಸತಾಯಿಸುವ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ಮಾನ್ಯ ನ್ಯಾಯಾಲಯದ ಮುಂದೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆಯ ಆಸ್ತಿಗಳು ನನ್ನ ಹೆಸರಿಗೆ ದಾಖಲಾಗಿವೆ ಎಂದಾಗ ಸಾಕ್ಷಿಯು ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ. ಸಾಕ್ಷಿಗೆ ಹೊದಿಕೆಶಿರೂರು ಗ್ರಾಮದ ಸ.ನಂಃ 161 ಹಿಸ್ಸಾ 1 ರ ಪಹಣಿ ಪತ್ರಿಕೆ, ಸ.ನಂಃ 201/2 ಅ ಪಹಣಿ ಪತ್ರಿಕೆ, ಸ.ನಂಃ 200/1 ಪಹಣಿ ಪತ್ರಿಕೆ, ಸ.ನಂಃ198/2 ಪಹಣಿ ಪತ್ರಿಕೆ, ಸ.ನಂಃ201/1-2 ರ ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿ.ಆರ್.2 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿಯು ಈ ಹಂತದಲ್ಲಿ ಮುಂದುವರಿದು ಸದ್ರಿ ಸ್ಥಳಗಳಿಗೆ ಸಂಬಂಧಪಟ್ಟಂತೆ ಇನ್ನೂ ಹಲವಾರು ಜನರ ಹೆಸರು ದಾಖಲೆಗಳಲ್ಲಿ ನಮೂದಾಗಿದ್ದು ಅವುಗಳ ಕುರಿತಾಗಿ ವಾಂಟಣಿಯಾಗಿಲ್ಲ ಎಂಬುದಾಗಿ ನುಡಿದಿದ್ದಾರೆ. ನನಗೆ ನನ್ನ ತವರು ಮನೆಯಿಂದ ಪ್ರತಿ ವರ್ಷ 4-5 ಲಕ್ಷ ರೂಪಾಯಿ ಆದಾಯ ಬರುವಷ್ಟು ಜಮೀನು ಬಂದಿದೆ ಎಂದರೆ ಸರಿಯಲ್ಲ. ನಾನು ಈಗ ಜಾಸ್ಮಿನ್ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸದ್ರಿ ಗಾರ್ಮೆಂಟ್ಸನಲ್ಲಿ ಕೆಲಸವಿದ್ದಾಗ ಆರ್ಡರ್ ಬರುತ್ತದೆ, ಅದರಂತೆ ನಾವು ಕೆಲಸವನ್ನು ಮಾಡುತ್ತೇವೆ. ಆದ್ದರಿಂದ ಅಂದಾಜು ತಿಂಗಳಿಗೆ ರೂ.5-6 ಸಾವಿರ ರೂಪಾಯಿ ಸಂಬಳ ಬರಬಹುದು. ನಾನು ಗಾರ್ಮೆಂಟ್ಸನಲ್ಲಿ 15-20 ಸಾವಿರ ರೂಪಾಯಿ ಸಂಬಳವನ್ನು ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಜೀವನಾಂಶದ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಖರ್ಚು ವೆಚ್ಚಗಳನ್ನು ನಿಭಾಯಿಸಲು ಶಕ್ತನಾಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು 2 ಮಕ್ಕಳನ್ನು ಸಾಕಲು ತಾನೇ ಮುಂದು ಬಂದಿದ್ದಾನೆ ಎಂದರೆ ಸರಿಯಲ್ಲ. ನಾನು ನನ್ನ ಎರಡೂ ಮಕ್ಕಳನ್ನು ಎದುರುದಾರನಿಗೆ ಕೊಡುವುದಿಲ್ಲ. ನಾನು ಎದುರುದಾರನಿಗೆ ನಾನು ಹೇಳಿದಂತೆ ಕೇಳಿದರೆ ಮಾತ್ರ

ನಿನ್ನ ಜೊತೆ ಜೀವನ ಮಾಡುತ್ತೇನೆ ಎಂದು ಹೇಳಿ ಹಿಂಸೆ ನೀಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಜೀವನಾಂಶ ಪಡೆಯಲು ಅನರ್ಹಳು ಎಂದರೆ ಸರಿಯಲ್ಲ.

ಎದುರುದಾರನು ಪ್ರಸ್ತುತವಾಗಿಯೂ BMTC ಯಲ್ಲಿ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದಾನೆ. ಎದುರುದಾರನು ತನ್ನ ತಾಯಿಯ ಆರೈಕೆ ಮಾಡಲು ಒಬ್ಬರನ್ನು ಕೆಲಸಕ್ಕೆ ಇಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಊರು ಹಳ್ಳಿಯಾಗಿದೆ ಎಂದರೆ ಸರಿ. ಸದ್ರಿ ಹಳ್ಳಿಯಿಂದ ಆಸ್ಪತ್ರೆಗೆ ಹೋಗಲು ಅಂದಾಜು 6-7 ಕಿ.ಮೀ. ಬೇಕಾಗುತ್ತದೆ. ಎದುರುದಾರನಿಗೆ ಯಾವುದೇ ಕೃಷಿ ಉತ್ಪನ್ನ ಬರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನು ತನ್ನ ತಾಯಿಯ ಆರೈಕೆ ಮತ್ತು ಔಷಧೋಪಚಾರ ಮಾಡಲು 10-15 ಸಾವಿರ ರೂಪಾಯಿ ಖರ್ಚಾಗುತ್ತದೆ ಎಂದರೆ ಸರಿಯಲ್ಲ.

ಎದುರುದಾರನು ತನ್ನ ತಾಯಿಯ ಆರೈಕೆ ಮಾಡಲು ಕೆಲಸಕ್ಕೆ ಇಟ್ಟುಕೊಂಡ ವ್ಯಕ್ತಿಗೆ 9-10 ಸಾವಿರ ರೂಪಾಯಿ ನೀಡಬೇಕೆಂದಾಗ ಸಾಕ್ಷಿಯು ಅವರಿಗೆ ಪ್ರತಿವರ್ಷ 9-10 ಲಕ್ಷ ರೂಪಾಯಿ ಅಡಿಕೆ ದುಡ್ಡು ಬರುತ್ತದೆ ಎಂಬುದಾಗಿ ನುಡಿದಿದ್ದಾರೆ. ನಾನು ನನ್ನ ಗಂಡ ಈಗಲೂ ಕರೆದರೆ ಹೋಗಲು ತಯಾರಿದ್ದೇನೆ. ಸಾಕ್ಷಿಯು ಮುಂದುವರಿದು 2 ತಿಂಗಳು ಕರೆದುಕೊಂಡು ಹೋಗಿ ಮತ್ತೆ ಪುನಃ ಹೊಡೆಯುವುದು, ಹೊರಗೆ ಹಾಕುವುದು ಮಾಡುತ್ತಾರೆ ಎಂಬುದಾಗಿ ನುಡಿದಿದ್ದಾರೆ. ನಾನು ಕೇಳಿದಷ್ಟು ಹಣವನ್ನು ಎದುರುದಾರನು ನನಗೆ ನೀಡಲು ಶಕ್ತನಾಗಿಲ್ಲ ಎಂದರೆ ಸರಿಯಲ್ಲ ಹಾಗೂ ಜೀವನಾಂಶವನ್ನು ಪಡೆಯುವ ಅವಶ್ಯಕತೆ ನನಗಿಲ್ಲ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ಎದುರುದಾರನು ಡೈವರ್ಸ ಪ್ರಕರಣವನ್ನು ದಾಖಲಿಸಿದ್ದಾನೆ ಎಂದರೆ ಸರಿ. ನಾನು ಸದ್ರಿ ಪ್ರಕರಣವನ್ನು ಹೊನ್ನಾವರ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿಕೊಂಡಿದ್ದೇನೆ ಎಂದರೆ ಸರಿ ಹಾಗೂ ಸದ್ರಿ ಪ್ರಕರಣವು ವಿಚಾರಣೆಯಲ್ಲಿ ಬಾಕಿ ಇದೆ ಎಂದರೆ ಸರಿ. ನಾನು ಸ್ವತಂತ್ರ ವಾಗಿ ಕೆಲಸ ಮಾಡುತ್ತಿರುವುದರಿಂದ ನನಗೆ ಜೀವಾನಂತ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿಯು ನಾನು ಗಳಿಸುವ 3-4 ಸಾವಿರ ರೂಪಾಯಿ ಹಣದಲ್ಲಿ ಜೀವನ ಸಾಗಿಸುವುದು ಕಷ್ಟ ಎಂಬುದಾಗಿ ನುಡಿದಿದ್ದಾರೆ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.